DECEMBER 20, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ;** ಮಂಡ್ಯದಲ್ಲಿ ಕೆಲವೇ ಕ್ಷಣಗಳಲ್ಲಿ, ಸರ್ವಾಧ್ಯಕ್ಷರ ಮೆರವಣಿಗೆಗೆ ಚಾಲನೆ.
- **ಹಂಪಿಯ ಪಾನ್ ಬಜಾರ್‌ನಲ್ಲಿ,** ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಿಂದ, ಉತ್ಖನನ.
- **ರಾಷ್ಟ್ರೀಯ ಲೋಕ ಅದಾಲತ್;** ರಾಜ್ಯದ ನ್ಯಾಯಾಲಯಗಳಲ್ಲಿ 38 ಲಕ್ಷದ 80 ಸಾವಿರದ 881 ಪ್ರಕರಣಗಳು, ಇತ್ಯರ್ಥ.
- **ಮೇಜರ್ ಧ್ಯಾನ್‌ಚಂದ್,** ರಾಷ್ಟ್ರೀಯ ವಿದ್ಯಾರ್ಥಿ ವೇತನ ಪುರಸ್ಕಾರ; ರಾಜ್ಯಪಾಲರಿಂದ, ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಪ್ರದಾನ.

<><><>

**ಈಗ ವಾರ್ತೆಗಳ ವಿವರ**

<><><>

**ಕಬ್ಬಿನ ಬೀಡು, ಸಕ್ಕರೆ ನಾಡು,** ಮಂಡ್ಯದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ಇಡೀ ನಗರ ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು, ಕನ್ನಡದ ತೇರನೆಳೆಯಲು ಸನ್ನದ್ಧ ಸ್ಥಿತಿಯಲ್ಲಿದೆ.

<><><>

**ವಿಶೇಷ ದೀಪಾಲಂಕಾರ,** ಹಸಿರು ತೋರಣ, ಕನ್ನಡದ ಬಾವುಟಗಳ ರಾರಾಜಿಸುವಿಕೆ, ಕನ್ನಡದ ಉದ್ದಾಮ ಸಾಹಿತಿಗಳ ಭಾವಚಿತ್ರಗಳು, ಕನ್ನಡದ ಘೋಷವಾಕ್ಯಗಳ ಸಿಂಚನ, ಪ್ರತಿಯೊಬ್ಬ ಕನ್ನಡಿಗನನ್ನು, ಭಾವ ಪರವಶ ಗೊಳಿಸುವಂತಿದೆ.

<><><>

**ಕನ್ನಡದ ಅನೇಕ ಕಲಾವಿದರು** ಒಟ್ಟಾಗಿ ಸೇರಿ, ಸಂಯೋಜಿಸಿರುವ, ಕನ್ನಡ ನಾಡು, ನುಡಿ, ಜಲ ಹಾಗೂ ಸಂಸ್ಕೃತಿಯ ಮಹತ್ವವನ್ನು ಕಟ್ಟಿಕೊಡುವ ಗೀತೆಯನ್ನು, ಸಚಿವ ಎನ್.ಚಲುವರಾಯಸ್ವಾಮಿ ಮೆಚ್ಚಿ, ಎಕ್ಸ್ ಖಾತೆಯಲ್ಲಿ, ಸಾಧ್ಯವಾಗಿಸಿದ ಎಲ್ಲ ಸಂಗೀತಗಾರರ ಶ್ರಮ ಸಾರ್ಥಕ ಎಂದಿದ್ದಾರೆ.

<><><>

**ಕನ್ನಡಿಗರ ಹಬ್ಬ,** ನಾಡು–ನುಡಿಯ ಜಾತ್ರೆ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆ, ಇಂದು ಬೆಳಗ್ಗೆ, 6 ರಿಂದ 6.30ರ ಮಧ್ಯೆ, ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಸಚಿವ ಎನ್.ಚಲುವರಾಯಸ್ವಾಮಿ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

<><><>

**ಕನ್ನಡ ಸಾಹಿತ್ಯ ಪರಿಷತ್ತಿನ** ರಾಜ್ಯಾಧ್ಯಕ್ಷ ಮಹೇಶ ಜೋಶಿ, ಪರಿಷತ್ತಿನ ಧ್ವಜವನ್ನು ಅನಾವರಣಗೊಳಿಸಿದರು.

<><><>

**ಮಂಡ್ಯ ಜಿಲ್ಲೆ ಕನ್ನಡ ಸಾಹಿತ್ಯ** ಪರಿಷತ್ತಿನ ಸಂಚಾಲಕಿ, ಮೀರಾ ಶಿವಲಿಂಗಯ್ಯ, ನಾಡ ಧ್ವಜವನ್ನು ಬಾನೆತ್ತರಕ್ಕೆ ಏರಿಸಿದರು.

<><><>

**ಇನ್ನು ಕೆಲವೇ ಕ್ಷಣಗಳಲ್ಲಿ,** ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಾಯಾ ಪ್ರತಿಮೆ ಮುಂಭಾಗದಲ್ಲಿ, ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ, ಮೈಸೂರು ರಾಜ ಮನೆತನದ ಮಾತೃಶ್ರೀ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಚಾಲನೆ ನೀಡಲಿದ್ದಾರೆ.

<><><>

**ಮೈಸೂರು–ಬೆಂಗಳೂರು** ರಸ್ತೆ ಮಾರ್ಗವಾಗಿ, ಈ ಮೆರವಣಿಗೆ, ಸಮ್ಮೇಳನ ನಡೆಯಲಿರುವ ಸ್ಯಾಂಜೋ ಆಸ್ಪತ್ರೆ ಬಳಿ, ಮುಕ್ತಾಯಗೊಳ್ಳಲಿದೆ.

<><><>

**888 ಮಹಿಳೆಯರು ಪೂರ್ಣ ಕುಂಭಗಳೊಂದಿಗೆ,** ವಿಶೇಷವಾಗಿ ಸಿದ್ಧಪಡಿಸಲಾದ ಸಮ್ಮೇಳನಾಧ್ಯಕ್ಷರ ರಥದ ಮುಂದೆ, ಮಂಗಳ ದ್ಯೋತಕವಾಗಿ, ಕಾಲ್ನಡಿಗೆಯಲ್ಲೇ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

<><><>

**ನಾಲ್ಕು ಸಾವಿರಕ್ಕೂ ಅಧಿಕ ಜಾನಪದ,** ಪ್ರದರ್ಶಕ ಕಲೆಗಳ ಹೆಸರಾಂತ ಕಲಾವಿದರು, ವಾದ್ಯ ಸಂಗೀತಗಾರರು, ತಮ್ಮ ವಿಶಿಷ್ಟ ಪೋಷಾಕಿನಲ್ಲಿ, ಗಮನ ಸೆಳೆಯುತ್ತಿದ್ದಾರೆ.

<><><>

**ಸಮ್ಮೇಳನದ ಸರ್ವಾಧ್ಯಕ್ಷರಾದ,** ಗೊ.ರು.ಚ. ಖ್ಯಾತಿಯ, ನಾಡೋಜ ಗೊಂಡೇದಹಳ್ಳಿಯ ರುದ್ರಪ್ಪಗೌಡರು ಚನ್ನಬಸಪ್ಪ, ರಥದಲ್ಲಿ ಆಸೀನರಾಗಿದ್ದು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಶ್ರೀ ಆದಿಚುಂಚನಗಿರಿ ಕ್ಷೇತ್ರದ, ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸಾನಿಧ್ಯ ವಹಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ್ ಕಂಬಾರ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ಪ್ರಥಮ ಬಾರಿಗೆ, ಅಖಿಲ ಭಾರತ ಕನ್ನಡ ಸಾಹಿತ್ಯ** ಸಮ್ಮೇಳನದಲ್ಲಿ, ದೃಷ್ಟಿ ವಿಶೇಷಚೇತನ ಕವಿಗಳಿಗೆ, ತಮ್ಮ ಅಂತರ್‌ದೃಷ್ಟಿಯ ಕವನಗಳನ್ನು ಮಂಡಿಸಲು, ಪರಿಷತ್ತು ಪ್ರಥಮ ದಿನವೇ ಅವಕಾಶ ಕಲ್ಪಿಸಿದ್ದು, ವಿಶೇಷ. ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯ, ಕವಿಗೋಷ್ಠಿಯಲ್ಲಿ ಸಮ್ಮೇಳನದ ಮೊದಲ ದಿನವಾದ ಇಂದು, ಮಧ್ಯಾಹ್ನ 3.30ಕ್ಕೆ ದೃಷ್ಟಿ ವಿಶೇಷಚೇತನರ ಕವಿಗೋಷ್ಠಿ ನಡೆಯಲಿದೆ. ಪ್ರಾತಿನಿಧಿಕವಾಗಿ 15 ಜನ ಭಾಗವಹಿಸಲಿದ್ದಾರೆ.

<><><>

**ಕವಿ ಹಾಗೂ ದೃಷ್ಟಿ ವಿಶೇಷಚೇತನರಾದ,** ನಿವೃತ್ತ ಕನ್ನಡ ಅಧ್ಯಾಪಕ, ಕಲಬುರಗಿಯ ಶಿವರಾಜಶಾಸ್ತ್ರಿ ಹೆರೂರ, ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ವಿಶ್ವ ಪಾರಂಪರಿಕ ತಾಣ ವಿಜಯನಗರ ಜಿಲ್ಲೆ** ಹಂಪಿಯಲ್ಲಿ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಪಾನ್ ಸುಪಾರಿ ಬಜಾರ್‌ನಲ್ಲಿ ಉತ್ಖನನ ಕೈಗೊಂಡಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ, ಹಂಪಿ ವೃತ್ತದ ನಿರ್ದೇಶಕ ನಿಹಿಲ್ ದಾಸ್ ಮಾಹಿತಿ ನೀಡಿ, ಪ್ರಸ್ತುತ ಉತ್ಖನನ ಕಾರ್ಯ, ತುಂಬ ಮಹತ್ವದ್ದಾಗಿದೆ. ನಿಧಾನವಾಗಿ, ಭಾರ ರಹಿತ ವಸ್ತುಗಳನ್ನು ಉಪಯೋಗಿಸಿಕೊಂಡು ನಡೆಸಲಾಗುತ್ತಿದೆ. ಈ ಉತ್ಖನನದಿಂದ ವಿಜಯನಗರ ಸಾಮ್ರಾಜ್ಯದ ಇನ್ನ ್ಟ ಮಹತ್ವದ ಮಾಹಿತಿಗಳು ದೊರೆಯಲಿವೆ ಎಂದರು. ಹಂಪಿ ಸಂಶೋಧಕರ ಸ್ವರ್ಗ ಮತ್ತು ದಕ್ಷಿಣ ಭಾರತದ ಅತಿ ದೊಡ್ಡ ಉತ್ಖನನ ತಾಣ ಎಂದು, ಅವರು ಬಣ್ಣಿಸಿದರು.

<><><>

**ಕಳೆದ 14ನೇ ತಾರೀಖು** ಆಯೋಜಿತ, ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ, ರಾಜ್ಯದ ನ್ಯಾಯಾಲಯಗಳಲ್ಲಿ 38 ಲಕ್ಷದ 80 ಸಾವಿರದ 881 ಪ್ರಕರಣಗಳು ಇತ್ಯರ್ಥಗೊಂಡಿವೆ.. ಒಟ್ಟು ಪರಿಹಾರ ಮೊತ್ತ 2 ಸಾವಿರದ 248 ಕೋಟಿ ರೂಪಾಯಿ ಎಂದು, ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ, ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ತಿಳಿಸಿದ್ದಾರೆ. ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಒಟ್ಟು ಸಾವಿರದ 581 ವೈವಾಹಿಕ ಪ್ರಕರಣಗಳನ್ನು, ಇತ್ಯರ್ಥಪಡಿಸಿ, 307 ದಂಪತಿಗಳು ಒಂದಾಗಿ ಜೀವನ ನಡೆಸಲು ತೀರ್ಮಾನಿಸಿದ್ದಾರೆ ಎಂದು, ಅವರು ಹೇಳಿದರು. ಹಿರಿಯ ನಾಗರಿಕರು ಸಾವಿರದ 921 ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಿದ್ದು, ವಿಶೇಷ ಎಂದರು.

<><><>

**ಬೆಂಗಳೂರಿನಲ್ಲಿ, 'ಸ್ಕಿಲ್ ಹಬ್ ಆನ್ಲೈನ್ ಗೇಮ್ಸ್ ಫೆಡರೇಶನ್'** ಆಯೋಜಿಸಿದ್ದ, ಎಸ್.ಓ.ಜಿ. ಗ್ರ್ಯಾಂಡ್ ಮಾಸ್ಟರ್ ಸೀರೀಸ್ ಕಾರ್ಯಕ್ರಮದಲ್ಲಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು,

ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ವಿದ್ಯಾರ್ಥಿ ವೇತನ ಮತ್ತು ಪುರಸ್ಕಾರವನ್ನು ನೀಡಿ ಅಭಿನಂದಿಸಿದರು. ಹಾಕಿ ಮಾಂತ್ರಿಕ ಮತ್ತು ಸತತ 3 ಒಲಿಂಪಿಕ್ಸ್‌ಗಳಲ್ಲಿ ದೇಶಕ್ಕೆ ಚಿನ್ನದ ಪದಕಗಳನ್ನು ಗೆದ್ದುಕೊಟ್ಟ ಮೇಜರ್ ಧ್ಯಾನಚಂದ್ ಸ್ಮರಣಾರ್ಥ, ಅವರ ಜನ್ಮದಿನವನ್ನು ಕ್ರೀಡಾ ದಿನವನ್ನಾಗಿ ಆಚರಿಸಲಾಗುತ್ತದೆ. ಅವರ ಬದುಕು ಪ್ರೇರಣಾದಾಯಿ ಎಂದರು.

<><><>

**ಅಂತಾರಾಷ್ಟ್ರೀಯ ಮಾನವ ಒಗ್ಗಟ್ಟಿನ ದಿನವಿಂದು.** ಬಡತನ, ಅಸಮಾನತೆ, ಸಾಮಾಜಿಕ ನ್ಯಾಯ ಮತ್ತು ಹವಾಮಾನ ಬದಲಾವಣೆಯಂತಹ ಸವಾಲುಗಳನ್ನು ಎದುರಿಸುವಲ್ಲಿ, ಜಾಗತಿಕ ಸಹಕಾರವನ್ನು ಒತ್ತಿ ಹೇಳುತ್ತದೆ.

<><><>

**ಹೊಸ ದಿಲ್ಲಿಯ ಕೇಂದ್ರಿಯ ಸೈನಿಕ ಮಂಡಳಿಯ,** ನೀತಿ ನಿರೂಪಣೆ ವಿಭಾಗದ ನಿರ್ದೇಶಕರು, ಬೆಂಗಳೂರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಕಾರ್ಯಾಲಯಕ್ಕೆ ಇಂದು ಭೇಟಿ ನೀಡಲಿದ್ದಾರೆ. ವಿಶ್ರಾಂತ ಸೈನಿಕರು, ಅವಲಂಬಿತರುಗಳು, ಕೇಂದ್ರಿಯ ಸೈನಿಕ ಮಂಡಳಿಗೆ ಸಂಬಂಧಿಸಿದ, ಕುಂದು ಕೊರತೆಗಳ ಅಹವಾಲು ಆಲಿಸಿ, ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ, ಅರ್ಜಿಗಳ ಸಮೇತ ಆಗಮಿಸುವಂತೆ, ತಿಳಿಸಲಾಗಿದೆ. sainikblr@rediffmail.com ಗೆ ಸಂಪರ್ಕಿಸಬಹುದಾಗಿದೆ.

<><><>

**ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ,** ಜನವರಿ 6 ರಿಂದ 10ರ ವರೆಗೆ, ಧಾರವಾಡ ತಾಲೂಕಿನ ದಡ್ಡಿಕಮಲಾಪೂರದಲ್ಲಿರುವ, ಸ್ಕೌಟ್ಸ್ ಮತ್ತು ಗೈಡ್ಸ್‌ದ ಜಿಲ್ಲಾ ತರಬೇತಿ ಕೇಂದ್ರದಲ್ಲಿ, ಪ್ರಥಮ ಕಿತ್ತೂರು ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಸಮಾವೇಶ–ಜಾಂಬೋರೇಟ್ ನಡೆಯಲಿದೆ. 'ರಾಷ್ಟ್ರಭಕ್ತಿ, ದೇಶದ ಶಕ್ತಿ' ಎಂಬ ಘೋ 'ವಾಕ್ಯದ, ಲಾಂಛನವನ್ನು ಜಿಲ್ಲಾಧಿಕಾರಿ ದಿವ್ಯಾ ಪ್ರಭು, ತಮ್ಮ ಕಚೇರಿಯಲ್ಲಿ ಬಿಡುಗಡೆ ಗೊಳಿಸಿದರು. ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಶ್ರೀಶೈಲ ಕರಿಕಟ್ಟಿ ಪಾಲ್ಗೊಂಡಿದ್ದರು.

<><><>

**ಚಿಕ್ಕಮಗಳೂರು ಜಿಲ್ಲೆ,** ಎನ್.ಆರ್.ಪುರ ತಾಲೂಕಿನ ಯಕ್ಕಡಬೈಲು ಗ್ರಾಮದಲ್ಲಿ, ಕಾಡಾನೆ ದಾಳಿಗೆ, ಕೃಷಿಕ ಏಲಿಯಾಸ್ ಮೃತಪಟ್ಟಿದ್ದಾರೆ. ಅವರ ಪುತ್ರ ವರ್ಗಿಸ್ ಪಾರಾಗಿದ್ದಾರೆ.

<><><>

**ಧಾರವಾಡ ಜಿಲ್ಲೆ, ಕಾನೂನು ಸೇವೆಗಳ** ಪ್ರಾಧಿಕಾರದ ಕಾರ್ಯದರ್ಶಿ, ನ್ಯಾಯಾಧೀಶ ಪಿ.ಎಫ್.ದೊಡ್ಡಮನಿ, ಕೆಲಗೇರಿ ಕೆರೆಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

**ಬೀದರಿನಲ್ಲಿ ನಿನ್ನೆ, 12 ದಶಾಂಶ 5 ಡಿಗ್ರಿ ಸೆಲ್ಶಿಯಸ್** ತಾಪಮಾನ ದಾಖಲು. ಕಲಬುರಗಿಯಲ್ಲಿ ಏರುಗತಿಯಲ್ಲಿ ಸಾಗಿದ ಚಳಿಗಾಲ.

<><><>

**ಮಂಗನ ಕಾಯಿಲೆ ಬಾಧಿತ,** ಉತ್ತರಕನ್ನಡ ಜಿಲ್ಲೆಯಲ್ಲಿ, ಕಾಯಿಲೆ ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ, ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಸೂಚಿಸಿದ್ದಾರೆ.

<><><>

**ಮಂಗಳೂರಿನಲ್ಲಿ ಕರಾವಳಿ ಉತ್ಸವ,** ನಾಳೆ 21 ರಿಂದ ಜನವರಿ 19ರ ವರೆಗೆ, ಆಯೋಜಿಸಲಾಗಿದೆ ಎಂದು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ತಿಳಿಸಿದ್ದಾರೆ.

<><><>

**ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ,** ಉದ್ಯಾನಗಿರಿಯ ಮುಖ್ಯ ಆವರಣದಲ್ಲಿ, ನಾಳೆಯಿಂದ ಮೂರು ದಿನಗಳ ವರೆಗೆ, ತೋಟಗಾರಿಕೆ ಮೇಳ ಆಯೋಜಿತವಾಗಿದೆ.

<><><>

- **87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ;** ಮಂಡ್ಯದಲ್ಲಿ ಕೆಲವೇ ಕ್ಷಣಗಳಲ್ಲಿ, ಸರ್ವಾಧ್ಯಕ್ಷರ ಮೆರವಣಿಗೆಗೆ ಚಾಲನೆ.
- **ಹಂಪಿಯ ಪಾನ್ ಬಜಾರ್‌ನಲ್ಲಿ,** ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಿಂದ, ಉತ್ಖನನ.
- **ರಾಷ್ಟ್ರೀಯ ಲೋಕ ಅದಾಲತ್;** ರಾಜ್ಯದ ನ್ಯಾಯಾಲಯಗಳಲ್ಲಿ 38 ಲಕ್ಷದ 80 ಸಾವಿರದ 881 ಪ್ರಕರಣಗಳು, ಇತ್ಯರ್ಥ.
- **ಮೇಜರ್ ಧ್ಯಾನ್‌ಚಂದ್,** ರಾಷ್ಟ್ರೀಯ ವಿದ್ಯಾರ್ಥಿ ವೇತನ ಪುರಸ್ಕಾರ; ರಾಜ್ಯಪಾಲರಿಂದ, ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಪ್ರದಾನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>